ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನಮ್ಮ ಸಮಸ್ಯೆ ನಿವಾರಣೆ ಮಾಡಬೇಕೆಂದು ಕೇಳಿಕೊಂಡಾಗ ಸರಿಯಾದ ಉತ್ತರ ಕೊಡದೆ ಇದ್ದರೆ ಸಮಸ್ಯೆ ನಿವಾರಣೆಯಾಗುತ್ತದೆಯೆ?

ಅಧ್ಯಕ್ಷರು :- ನೀವು ಅದರ ಕಛೇರಿಗೆ ಹೋಗಿ ಉತ್ತರ ಕೇಳುತ್ತೀರಿ, ಉತ್ತರ ಕೊಟ್ಟಾಗ ಇನ್ನು ಸರಿಯಾಗಿ ಇಲ್ಲ ಎಂದು ಹೇಳುತ್ತೀರಿ.

ಶ್ರೀ ಬಸವರಾಜ ಹೆಚ್ ಪಾಟೀಲ್ :- ಅವರ ಸಮಸ್ಯೆ ಬಗ್ಗೆ ಕ್ಲಿಯರ್ ಆಗಿ ತಮ್ಮ ಗಮನಕ್ಕೆ ತಂದಿದ್ದೇವೆ. ಇನ್ನು 18-20 ತಿಂಗಳಲ್ಲಿ ಬೇಡಿಕೆ ಪೂರೈಸುತ್ತೇವೆಂದು ಉತ್ತರದಲ್ಲಿ ಕೊಡಲಾಗಿದೆ. ನಿಮ್ಮ ಭಾಗದಲ್ಲಿ ಎರಡು ಸಬ್‌ಸ್ಟೇಷನ್ ಈಗಾಗಲೇ ಪೂರ್ಣಗೊಂಡಿದೆ. ಈಗ ತಮ್ಮ ಕಡೆ ಟೆಂಡರ್ ಕರೆದಿದ್ದೇವೆ. ಅದು ಕೊನೆಯ ಹಂತದಲ್ಲಿದೆ. 18-20 ತಿಂಗಳಲ್ಲಿ ಪೂರ್ಣಗೊಳಿಸುತ್ತೇವೆಂದು ಆಶ್ವಾಸನೆ ಕೊಡಲಾಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :- ಮಾನ್ಯ ಅಧ್ಯಕ್ಷರೆ, ನಾನು ಎರಡು ಪ್ರಶ್ನೆಗಳನ್ನು ಕೇಳುತ್ತೇನೆ, ಟರ್ನ್‌ಕೀ ಬೇಸಿಸ್ ಮೇಲೆ ಇದನ್ನು ಕೊಡುತ್ತೇವೆಂದು ಹೇಳಿದ್ದೀರಿ ಅಲ್ಲ, ಆ ಗುತ್ತಿಗೆ ಪೂರ್ಣಗೊಳಿಸಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ. ಟರ್ನ್‌ಕಿ ಬೇಸಿಸ್ ಎಂದರೆ ಅಗ್ರಿಮೆಂಟ್ ಆದಮೇಲೆ ಅದು ಚಾಲನೆ ಆಗುತ್ತದೆ. ಟರ್ನ್‌ಕೀ ಬೇಸಿಸ್ ಅಗ್ರಿಮೆಂಟ್ ಯಾವಾಗ ಮಾಡಿಕೊಳ್ಳುತ್ತೀರಿ? ಇದೊಂದು ಪ್ರಶ್ನೆ. ಇನ್ನು ಎರಡನೆಯದಾಗಿ ಇವರು ಹೇಳಿರತಕ್ಕಂಥ ಉತ್ತರದಲ್ಲಿ 18-20 ತಿಂಗಳಾಗುತ್ತದೆ ಎಂದು ಹೇಳಿದ್ದೀರಿ. ಅದನ್ನು ಇವರು ಪ್ರಾರಂಭ ಮಾಡುವುದು ಮುಂದಿನ ವರ್ಷ. ಅಲ್ಲಿಂದ ಮುಂದಕ್ಕೆ 18-20 ತಿಂಗಳು ಎಂದರೆ ಎರಡೂವರೆ ವರ್ಷ ನಮಗೆ ಕರೆಂಟ್ ಇಲ್ಲವೆನ್ನುವ ಭಾವನೆಯನ್ನು ಉತ್ತರದಲ್ಲಿ ವ್ಯಕ್ತಪಡಿಸಿದ್ದಾರೆ. ಈ ರೀತಿಯಾದರೆ ನಮಗೆ ಕಷ್ಟವಾಗುತ್ತದೆ. ತಕ್ಷಣ ಟರ್ನ್‌ಕೀ ಬೇಸಿಸ್ ಮೇಲೆ ಪ್ರಾರಂಭ ಮಾಡುವಂತಹ ವಿಚಾರ ಮಾಡಬೇಕು. ಇದಕ್ಕೆ ಪೂರಕವಾಗಿ ನನ್ನ ಕ್ಷೇತ್ರದಲ್ಲಿ ನಾಗೇನಹಳ್ಳಿ ಮತ್ತು ನಿಡಘಟ್ಟದಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಶೀಘ್ರವಾಗಿ ಮಾಡಬೇಕು.

ಶ್ರೀ ಬಸವರಾಜ ಹೆಚ್ ಪಾಟೀಲ್ :- ಈಗ ಮಾರ್ಚ್ ಮುಗಿಯುತ್ತಿದೆ. ಏಪ್ರಿಲ್‌ನಲ್ಲಿ ಕಾರ್ಯ ಪ್ರಾರಂಭ ಮಾಡಿ 18-20 ತಿಂಗಳಿನಲ್ಲಿ ಕೊಡಬಹುದು. ಇನ್ನು ತಮ್ಮ ಕ್ಷೇತ್ರದಲ್ಲಿ ಸುಧಾರಣೆ ಮಾಡಬೇಕು ಎಂದು ಸಲಹೆಗಳನ್ನು ಕೊಡುತ್ತಿದ್ದೀರಿ, ಅದನ್ನು ಕೂಡ ಆದಷ್ಟು ಬೇಗ ಮಾಡಬೇಕೆಂದು ತಮಗೆ ಇರತಕ್ಕಂಥ ತೊಂದರೆಯನ್ನು ಬಗ್ಗೆ ಗಮನಹರಿಸುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :- ಮಾನ್ಯ ಅಧ್ಯಕ್ಷರೆ, ನಾಗೇನಹಳ್ಳಿ ಹಾಗೂ ನಿಡಘಟ್ಟದಲ್ಲಿ ಸ್ಟೇಷನ್ ಪ್ರಾರಂಭ ಮಾಡಬೇಕೆಂದು ಕೇಳುತ್ತೇನೆ.

Mr. Speaker :- You are a rule-minded legislator. ನ್ಯಾಯವಾಗಿ ಪ್ರಶ್ನೆ ಹಾಕಿದವರು ಕ್ಲಾರಿಫಿಕೇಷನ್ ಕೇಳಬೇಕು, ನಿಮಗೆ ಕೇಳುವುದಕ್ಕೆ ಹಕ್ಕಿಲ್ಲ. ಎರಡು ಮೂರು ಸಪ್ಲಿಮೆಂಟರಿ ಕೇಳುವುದಕ್ಕೆ ನಿಮಗೆ ಅವಕಾಶ ಇಲ್ಲ.

ಆ) ಕರ್ನಾಟಕ ಮಹಾನಗರಪಾಲಿಕೆಗಳಲ್ಲಿಯ ಅಧಿಕಾರಿಗಳು ಮತ್ತು ನೌಕರರು ಅನೇಕ ವರ್ಷಗಳಿಂದ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ.

+ ಶ್ರೀ ದಿನೇಶ್ ಗುಂಡುರಾವ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರು ಅಲ್ಲಿ ಬಿಜಿ ಆಗಿದ್ದಾರೆ.

ಅಧ್ಯಕ್ಷರು :- ಶಿವಕುಮಾರ್‌ರವರೇ ತಾವು ತಮ್ಮ ಸ್ಥಳಕ್ಕೆ ಹೋಗಿ.

ಶ್ರೀ ದಿನೇಶ್ ಗುಂಡುರಾವ್ (ಗಾಂಧಿನಗರ) :- ಮಾನ್ಯ ಅಧ್ಯಕ್ಷರೆ, ಮಾನ್ಯ ವಿಜಯಕುಮಾರ್ ಶೆಟ್ಟಿಯವರು ಮಾನ್ಯ ಸೀತಾರಾಂ ಹಾಗೂ ನಾನು ಒಂದು ಗಮನಸೆಳೆಯುವ ಸೂಚನೆ ಕೊಟ್ಟಿದ್ದೇವೆ. ಆದರ ಮುಖ್ಯ ಕಾರಣವೇನೆಂದರೆ ನಾವೆಲ್ಲರೂ ಕೂಡ ನಗರಪಾಲಿಕೆಗಳಲ್ಲಿ ಕೆಲಸ ಮಾಡತಕ್ಕಂಥ ಶಾಸಕರು ಆಗಿದ್ದೇವೆ ಮತ್ತು ನಗರಪಾಲಿಕೆಗಳಲ್ಲಿ ಅಧಿಕಾರಿಗಳ ಒಂದು ಕೆಲಸದಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ. ಆಗ ನಾವು ಕೆಲಸದ ಮೇಲೆ ನಿಯಂತ್ರಣ ಹಾಗೂ ಚುರುಕು ಮಾಡುವಂತಹ ಸಂದರ್ಭದಲ್ಲಿ ಅನೇಕ ಸಲ ಅವರ್ಯಾರೂ ಕೂಡ ನಮ್ಮ ಮಾತನ್ನು ಕೇಳದೆ ಇರುವಂತಹ ಪರಿಸ್ಥಿತಿ ಇದೆ. ಏಕೆಂದರೆ ಅಧಿಕಾರಿಗಳಲ್ಲಿ ನಾವು ಕಾರ್ಪೊರೇಷನ್‌ನಲ್ಲಿ ಇರುವವರು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ, ಬೆಂಗಳೂರಿನಲ್ಲಿ ಇರುವವರ, ಮಂಗಳೂರಿನಲ್ಲಿ, ಗುಲ್ಬರ್ಗ ಹುಬ್ಬಳ್ಳಿ ಧಾರವಾಡ ನಾವೆಲ್ಲಾ ಅಲ್ಲಲ್ಲೇ ಇರುತ್ತೇವೆ ಎನ್ನುವ ಭಾವನೆ ಇದೆ. ಆದರೆ ಇವತ್ತು ಅನೇಕ ಅದಕ್ಷ ಅಧಿಕಾರಿಗಳು ಇದ್ದಾರೆ ಹಾಗೂ ಒಳ್ಳೆಯ ಅಧಿಕಾರಿಗಳು ಇರುತ್ತಾರೆ. ಯಾರು ಅದಕ್ಷ ಅಧಿಕಾರಿಗಳು ಇರುತ್ತಾರೆ ನಾವು ಅವರಿಗೆ ಎಷ್ಟು ಬಯ್ದರೂ ಕೂಡ ಅವರಿಗೆ ಯಾವುದೆ ಭಯಭೀತಿ ಇರುವುದಿಲ್ಲ. ಅವರಿಗೆ ದಪ್ಪ ಚರ್ಮ ಇರುತ್ತದೆ. ಅವರಿಗೆ ಏನು ಹೇಳಿದರೂ ಪ್ರಯೋಜನವಾಗುವುದಿಲ್ಲ. ಈ ಇಲಾಖೆಯಿಂದ ಉತ್ತರ ಬಂದಿರುವುದನ್ನು ನೋಡಿದರೆ ನಮಗೆ ಏನು ಅನ್ನಿಸುತ್ತದೆ ಎಂದರೆ, ಹಿಂದೆ ಯಾರೋ ರಿಟ್ ಷಿಟಷನ್ ಹಾಕಿದ್ದು, ಅದಕ್ಕೆ ಸುಪ್ರೀಂಕೋರ್ಟ್‌ನ ಸ್ಟೇ ಇದೆ ಎಂದು ಹೇಳುತ್ತಾರೆ. ನಮ್ಮ ಇಲಾಖೆಯಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಸುಪ್ರೀಂಕೋರ್ಟ್‌ನವರು ಬಹಳ ವರ್ಷಗಳ ಹಿಂದೇ ಹೇಳಿರತಕ್ಕಂಥ ವಿಷಯ. ಅದೇನೆಂದರೆ ನಿಮ್ಮ ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್ ಬದಲಾವಣೆ ಮಾಡಿ ನಂತರ ನೀವು ಅದಕ್ಕೆ ಬರಬಹುದು ಎಂದಿದೆ.

ಅಧ್ಯಕ್ಷರು :- ಬನ್ನಿಕೋಡ್ ರವರೆ, ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು, ನೀವು ಅವರ ಹತ್ತಿರ ಹೋಗಿ ಮಾತನಾಡಿ ಡಿಸ್ಪರ್ಬ್ ಮಾಡಿದರೆ ಹೇಗೆ? ನೀವು ಪಕ್ಕದಲ್ಲಿ ಕುಳಿತುಕೊಂಡರೆ ತೊಂದರೆ ಆಗುವುದಿಲ್ಲವೆ?

ಶ್ರೀ ದಿನೇಶ್ ಗುಂಡುರಾವ್ :- ಸುಪ್ರೀಂ ಕೋರ್ಟ್‌ನವರು ಕೊಟ್ಟಿರುವ ತೀರ್ಪು ಈಗಾಗಲೇ ಅನೇಕ ವರ್ಷಗಳಾಗಿವೆ. ಇಷ್ಟು ವರ್ಷಗಳಾಗಿದ್ದರೂ ಕೂಡ ಇನ್ನೂ ಏಕೆ ಸರ್ಕಾರ ರಿಕ್ರೂಟ್‌ಮೆಂಟ್ ರೂಲ್ ಬದಲಾವಣೆ ಮಾಡಿಲ್ಲ? ಅದನ್ನು ಮಾಡಿದರೆ ಆಡಳಿತದಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಬರುತ್ತದೆ, ನಮಗೆ ಒಳ್ಳೆಯ ಕೆಲಸ ಮಾಡುವುದಕ್ಕೆ ಕೂಡ ಶಕ್ತಿ ಬರುತ್ತದೆ, ಆದುದರಿಂದ ಆದಷ್ಟು ಬೇಗ ಈ ಬಾರಿಯಾದರೂ ರಿಕ್ರೂಟ್‌ಮೆಂಟ್ ರೂಲ್ ಬದಲಾವಣೆ ತಂದು ಇಂಟರ್ ಕಾರ್ಪೊರೇಷನ್ ಟ್ರಾನ್ಸ್‌ಫರ್ ಮಾಡುವುದಕ್ಕೆ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಮಾನ್ಯ ವಿಜಯಕುಮಾರ್ ಶೆಟ್ಟಿಯವರು ಮಾತನಾಡಬೇಕು, ಅವರು ನಿನ್ನ ನನ್ನ ಹತ್ತಿರ ಜಗಳ ಆಡಿಕೊಂಡು ಹೋದರು, ಆಗ ಅವರು ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ದಿನೇಶ್ ಗುಂಡುರಾವ್, ಸೀತಾರಾಂ ಹಾಗೂ ವಿಜಯ ಕುಮಾರು ಶೆಟ್ಟಿ ಇವರು ಮಹಾನಗರಪಾಲಿಕೆಗಳಲ್ಲಿ

ಆಂತರಿಕ ಟ್ರಾನ್ಸ್‌ಫರ್ ಮಾಡಬೇಕು ಮತ್ತು ಸರ್ಕಾರ ಇದಕ್ಕೆ ಬದ್ಧರಾಗಿರಬೇಕೆಂದು ಏನು ಗಮನಸೆಳೆಯುವ ಸೂಚನೆ ಕೊಟ್ಟಿದ್ದಾರೆ, ಅದಕ್ಕೆ ನಾವು ಹಿಂದೆ ಒಂದು ಉತ್ತರವನ್ನು ಕೊಟ್ಟಿದ್ದೆವು. ಅದು ಸರ್ಕ್ಯೂಲೇಟ್ ಆಗಿತ್ತು. ಅದನ್ನು ವಾಪಸ್ಸು ಪಡೆದು ಮತ್ತೆ ಈಗ ಒಂದು ಅಮೆಂಡ್‌ಮೆಂಟ್ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

1.10 ಪಿ.ಎಂ.

ಕರ್ನಾಟಕ ಮಹಾನಗರ ಪಾಲಿಕೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ, ಅಧಿಕಾರಿಗಳನ್ನು ಪರಸ್ಪರ ವರ್ಗಾವಣೆ ಮಾಡಲು ಕೆ.ಎಂ.ಸಿ. ಕಾಯ್ದೆ 1976 ಕಲಂ 91-ಎ ಅನ್ವಯ ಅವಕಾಶವಿರುತ್ತದೆ. ಇದರ ಅನ್ವಯ ಈ ಹಿಂದೆ ಒಂದು ಜಾಗದಲ್ಲಿ ಹಲವಾರು ವರ್ಷಗಳು ಕೆಲಸ ಮಾಡುತ್ತಿದ್ದ ಮಹಾನಗರ ಪಾಲಿಕೆಯ ನೌಕರರನ್ನು ವರ್ಗಾವಣೆ ಮಾಡಲಾಗುತ್ತಿತ್ತು. ಸರ್ಕಾರದ ಈ ಕ್ರಮವನ್ನು ವರ್ಗಾಯಿಸಲ್ಪಟ್ಟ ಕೆಲವು ನೌಕರರು, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ, ಇದರಲ್ಲಿ ತಮ್ಮ ವರ್ಗಾವಣೆಯನ್ನು ಪ್ರಶ್ನಿಸಿರುತ್ತಾರೆ ಉಚ್ಚ ನ್ಯಾಯಾಲಯವು ಆಗ ಸರ್ಕಾರವು ಮಾಡಿದ ಪರಸ್ಪರ ವರ್ಗಾವಣೆಯನ್ನು ರದ್ದುಪಡಿಸಿ, ಇಂತಹ ವರ್ಗಾವಣೆಯನ್ನು ಕೇಂದ್ರಿಕೃತ ಸೇವೆ ಪ್ರಾಧಿಕಾರವನ್ನು (ಸೆಂಟ್ರ ಲೈಜ್ ಸರ್ವಿಸ್) ರಚಿಸಿದ ನಂತರ ಮಾಡಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ, ಒಂದು ಮಹಾನಗರ ಪಾಲಿಕೆಯಿಂದ ಮತ್ತೊಂದು ಮಹಾನಗರ ಪಾಲಿಕೆಗೆ, ಸ್ಥಳೀಯ ಸಂಸ್ಥೆಗಳ ವರ್ಗಾವಣೆಯನ್ನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಈ ರೀತಿ ವರ್ಗಾವಣೆ ಮಾಡಲು ಕೇಂದ್ರಿಕೃತವಾದ ಸೇವೆಯ ಪ್ರಾಧಿಕಾರದ ಅಗತ್ಯವೂ ಇರುವುದಿಲ್ಲ. ಅದುದರಿಂದ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಪರಿಶೀಲಿಸಿದ ಅರ್ಜಿ ಸಲ್ಲಿಸಿದ ಕ್ರಮವನ್ನು ಕೈಗೊಳ್ಳಲಾಗುವುದು. ತಮಗೆ ಈ ಮುಖಾಂತರ, ಮಾನ್ಯ ಸದಸ್ಯರುಗಳಿಗೆ ಏನು ಆಶ್ವಾಸನೆಯನ್ನು ಕೊಡುತ್ತೇನೆಂದರೆ ಈಗಾಗಲೇ ಕರ್ನಾಟಕ ಮುನಿಸಿಪಾಲ್ ಕಾರ್ಪೊರೇಷನ್ ಆಕ್ಟ್‌ನಲ್ಲೆ ವರ್ಗಾವಣೆ ಮಾಡಲು ಎಲ್ಲಾ ರೀತಿಯ ಅವಕಾಶಗಳು ಇವೆ. ಆ ರೀತಿ ಇರುವುದರಿಂದ ತಮ್ಮ ಅಭಿಪ್ರಾಯದಂತೆ ಆ ಕಡೆಯಿಂದ ಈ ಕಡೆಗೆ ವರ್ಗಾವಣೆ ಮಾಡುವಂತಹ ಕೆಲಸದ ಬಗ್ಗೆ ಸರ್ಕಾರವೂ ಕಾನೂನಿನ ಅಭಿಪ್ರಾಯವನ್ನು ಪಡೆದು ಸದ್ಯದಲ್ಲೆ ಇದನ್ನು ಮಾಡುತ್ತೇವೆ.

ಶ್ರೀ ದಿನೇಶ್ ಗುಂಡೂರಾವ್ :- ಮಾನ್ಯ ಅಧ್ಯಕ್ಷರೇ, ಇದು ಬಹಳ ಹಳೆಯ ವಿಷಯವಾಗಿದೆ, ಹಿಂದೆ ಇದ್ದಂತಹ ಸಚಿವರು ಶ್ರೀ ಚಿಮ್ಮನಕಟ್ಟಿಯವರೂ ಸಹ ಇದೇ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದರು. ಅದುದರಿಂದ ಸರ್ಕಾರ ಯಾವಾಗ ಕ್ರಮ ತೆಗೆದುಕೊಳ್ಳುತ್ತದೆಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ, ಇಲ್ಲದಿದ್ದರೆ ಮತ್ತೆ ಡಿಲೇ ಆಗುತ್ತದೆ, ಯಾವುದೇ ರೀತಿಯಲ್ಲೂ ಇದು ಕಾರ್ಯರೂಪಕ್ಕೆ ಬರುವುದಿಲ್ಲ. ಆದುದರಿಂದ ಮಾನ್ಯ ಸಚಿವರು ಇದನ್ನು ಆದಷ್ಟು ಬೇಗ ಮೂವ್ ಮಾಡಿ ಕೊಟ್ಟರೆ, ನಗರ ಪಾಲಿಕೆಗಳೂ ಸಹ ಒಂದು ಹಿಡಿತದಲ್ಲಿ ಬರುತ್ತವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದು ತಡವಾಗಬಾರದೆಂದು ಹೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರೇ, ನಿಮ್ಮ ಸರ್ಕಾರದ ಮೇಲೆ ನಂಬಿಕೆ ಇರಲಿ, ಆದಷ್ಟು ಜಾಗ್ರತೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.